
# ರಜತ ಸಂಭ್ರಮ
# ನೆನಪಿನ ಅಂಗಳದಲ್ಲಿ




## ಇನ್ನರ್ ವೀಲ್ ಕ್ಲಬ್
### ಬೀರೂರು

Scanned with CamScanner

# ಮುನ್ನುಡಿ

ಬೀರೂರಿನಲ್ಲಿ ಇನ್ನರ್ ವೀಲ್ ಸಂಸ್ಥೆಯು ಪ್ರಾರಂಭವಾಗಿ 25 ವರ್ಷಗಳು ಕಳೆದಿವೆ. ಆದರೆ ಈ ಸಂಸ್ಥೆಯಲ್ಲಿ ಪ್ರತಿ ವರ್ಷವು ಹಲವಾರು ಕಾರ್ಯಕ್ರಮಗಳನ್ನು ಮಾಡುತ್ತಾ ಬಂದಿದೆ. ಶೈಕ್ಷಣಿಕ, ವೈದ್ಯಕೀಯ, ಪರಿಸರ, ಜನಜಾಗೃತಿ, ಸಾಂಸ್ಕೃತಿಕ, ಸಾಹಿತ್ಯ, ಪ್ರತಿಭಾ ಪುರಸ್ಕಾರಗಳು, ಉತ್ತಮ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸಿದವರಿಗೆ ಸನ್ಮಾನ, ಹೀಗೆ ಎಲ್ಲಾ ಕ್ಷೇತ್ರಗಳಲ್ಲೂ ಸೇವೆಯನ್ನು ಮಾಡುತ್ತಾ ಬಂದಿದೆ. ಅಲ್ಲದೆ ಪ್ರತಿವರ್ಷ ನೇಮಕವಾಗುವ ಅಧ್ಯಕ್ಷರು ಒಂದು ವರ್ಷದ ಅವಧಿಯಲ್ಲಿ ಪ್ರತಿಯೊಂದು ಕ್ಷೇತ್ರದಲ್ಲೂ ತಮ್ಮದೇ ಆದ ರೀತಿಯಲ್ಲಿ ಉತ್ತಮ ಯಶಸ್ವಿ ಕಾರ್ಯಗಳನ್ನು ನಿರ್ವಹಿಸುತ್ತಾ ಬಂದಿದ್ದಾರೆ. ಅಲ್ಲದೇ ಬೀರೂರಿನಲ್ಲಿ ಇನ್ನರ್ ವೀಲ್ ಸಂಸ್ಥೆ ಎಂದರೆ ಪ್ರತಿಯೊಬ್ಬರೂ, ಜನಸೇವೆಗಾಗಿಯೇ ಈ ಸಂಸ್ಥೆ ಇರುವುದು ಎಂದು ಹೆಮ್ಮೆ ಪಡುತ್ತಾರೆ.

ಇದಕ್ಕೆ ಕಾರಣ ಸಂಸ್ಥೆಯಲ್ಲಿ ನಡೆಸಿಕೊಂಡು ಬಂದಿರುವ ಉತ್ತಮ ಕಾರ್ಯ ಚಟುವಟಿಕೆಗಳು. ಉನ್ನತ ಸ್ಥಾನದಿಂದ ಕೆಳ ಹಂತದ ದರ್ಜೆಯಲ್ಲೂ ಕೆಲಸ ಮಾಡುವವರ ಸೇವೆಯನ್ನು ಗುರುತಿಸಿ, ಅವರಿಗೆ ಸನ್ಮಾನಗಳನ್ನು ಈ ಸಂಸ್ಥೆಯು ಮಾಡಿರುತ್ತದೆ. ಮೂಲ ಸೌಕರ್ಯಗಳಿಲ್ಲದವರನ್ನು ಗುರುತಿಸಿ, ಅವರಿಗೆ ಉತ್ತಮವಾದ ಸೌಕರ್ಯಗಳನ್ನು ಒದಗಿಸುತ್ತಾ ಬಂದಿದೆ. ಈ ಸಂಸ್ಥೆಯು ಪ್ರಾರಂಭವಾದಾಗಿನಿಂದ ಒಂದೇ ಲಯದಲ್ಲಿ ನಡೆದುಕೊಂಡು ಬಂದಿರುತ್ತದೆ. ಇದಕ್ಕೆ ಕಾರಣ ಸಂಸ್ಥೆಯಲ್ಲಿರುವ ಧ್ಯೇಯ, ಶಿಸ್ತು ಮತ್ತು ಪರಸ್ಪರ ಹೊಂದಾಣಿಕೆ, ಪ್ರತಿ ಕಾರ್ಯಕ್ರಮಗಳಲ್ಲೂ ಎಲ್ಲ ಸದಸ್ಯರ ಸಹಕಾರ. 'ಜನಸೇವೆಯೇ ಜನಾರ್ಧನನ ಸೇವೆ' ಎಂಬ ವಾಕ್ಯದೊಂದಿಗೆ ಸ್ನೇಹದೊಂದಿಗೆ ಈ ಸಂಸ್ಥೆ ಬೆಳೆದು ಬಂದಿದೆ. ಇದೇ ರೀತಿ ಮುಂದೆಯೂ ಉತ್ತಮ ಕಾರ್ಯಕ್ರಮಗಳನ್ನು ಮಾಡುತ್ತಾ ಈ ಸಂಸ್ಥೆಯ ವಜ್ರ ಮಹೋತ್ಸವವನ್ನು ಆಚರಿಸಲಿ ಎಂದು ಶುಭ ಹಾರೈಸುತ್ತೇನೆ.

ನನಗೆ ಈ ಕೈಪಿಡಿಯನ್ನು ರಚಿಸಲು ಅವಕಾಶ ನೀಡಿದ್ದಕ್ಕಾಗಿ ಅಧ್ಯಕ್ಷರಿಗೂ ಮತ್ತು ಸಂಸ್ಥೆಯ ಎಲ್ಲಾ ಸದಸ್ಯರಿಗೂ ನಾನು ಅಭಾರಿಯಾಗಿದ್ದೇನೆ.

ಇನ್ನರ್ ವೀಲ್ ಸಂಸ್ಥೆಯ ಈ ಕೆಲಸವು ತಮ್ಮೆಲ್ಲರಿಗೂ ಹರ್ಷದಾಯಕವಾಗಿರಲಿ.

'ಸೇವೆ ಎಂಬ ಯಜ್ಞದಲ್ಲಿ ಸಮಿತೆಯಂತೆ ಉರಿಯುವ''

ಧನ್ಯವಾದಗಳೊಂದಿಗೆ,

**ಸವಿತ ಜಗದೀಶ್**



Scanned with CamScanner

# ನಮ್ಮ ಸಂಸ್ಥೆಯ ಬಗ್ಗೆ .....

ಎಲ್ಲಾ ಇನ್ನರ್ ವೀಲ್ ಕ್ಲಬ್ ಆತ್ಮೀಯ ಸ್ನೇಹಿತೆಯರಿಗೆ ಬೀರೂರು ಇನ್ನರ್ ವೀಲ್ ಸ್ನೇಹಿತೆಯರಿಂದ ಹೃದಯ ಪೂರ್ವಕ ವಂದನೆಗಳು.

ನಮ್ಮ ಸಂಸ್ಥೆಯು ಅಸ್ತಿತ್ವಕ್ಕೆ ಬರಲು ಅಂದಿನ ರೋಟರಿ ಅಧ್ಯಕ್ಷರಾದ ಶ್ರೀಯುತ ಕೆ.ಎನ್. ನಾಗರಾಜ್‌ರವರು ಪ್ರಮುಖ ಕಾರಣಕರ್ತರಾಗಿದ್ದಾರೆ. ನಮ್ಮ ಊರಿನ ಇನ್ನರ್ ವೀಲ್ ಕ್ಲಬ್‌ನ್ನು 1997 ರಂದು ಅಂದಿನ ಇನ್ನರ್ ವೀಲ್ ಸಂಸ್ಥೆಯ ಹಿರಿಯರಲ್ಲೊಬ್ಬರಾದ ಶ್ರೀಮತಿ ಪ್ರೇಮಾ ಶಿವಸ್ವಾಮಿಯವರ ಒತ್ತಾಸೆಯಂತೆ ನಮ್ಮ ಕ್ಲಬ್ ಅಸ್ತಿತ್ವಕ್ಕೆ ಬಂದಿತು. ದಿನಾಂಕ 25-11-1997 ರಂದು ಅಂದಿನ ಜಿಲ್ಲಾ ಚೇರ್‌ಮನ್‌ರಾದ ಶ್ರೀಮತಿ ಕಮಲ ಮಂಜುನಾಥ್‌ರವರು ತಮ್ಮ ಅಮೃತ ಹಸ್ತದಿಂದ ನಮ್ಮ ಕ್ಲಬ್‌ನ್ನು ಉದ್ಘಾಟಿಸಿದರು.

Character Presentation ಕಾರ್ಯಕ್ರಮವನ್ನು ದಿನಾಂಕ 16-12-1998 ರಂದು ಡಾ॥ ಗೀತಾ ರವಿಕುಮಾರ್‌ರವರು ನಡೆಸಿಕೊಟ್ಟರು. Character No. 4849 ಚಾಮರಾಜನಗರ ಇನ್ನರ್ ವೀಲ್ ಕ್ಲಬ್‌ನವರು ನಮ್ಮ ಕ್ಲಬ್‌ನ್ನು ಪ್ರಾಯೋಜಿಸಿದರು. ಶ್ರೀಮತಿ ಅನುಸೂಯ ಶ್ರೀರಾಮ್ ರವರು ಸ್ಥಾಪಕ ಅಧ್ಯಕ್ಷರಾಗಿ ಮತ್ತು ಶ್ರೀಮತಿ ಚಂದ್ರಿಕಾ ನಾಗರಾಜ್‌ರವರು ಸ್ಥಾಪಕ ಕಾರ್ಯದರ್ಶಿಯಾಗಿಯೂ ನಮ್ಮ ಕ್ಲಬ್‌ಗೆ ಭದ್ರ ಅಡಿಪಾಯ ಹಾಕಿದರು. ಹಾಗೆ 19 ಜನ ಸ್ಥಾಪ ಸದಸ್ಯೆಯರನ್ನು ನೀಡಿ ಇಂದಿಗೆ 30 ಸದಸ್ಯರೊಂದಿಗೆ ಉನ್ನತ ಸ್ಥಾನದಲ್ಲಿ ನಿಂತಿದ್ದೇವೆ. ಅಂದಿನಿಂದ ನಮ್ಮ ಕ್ಲಬ್ 25ನೇ ವಸಂತಕ್ಕೆ ಕಾಲಿಡುತ್ತಿದೆ. ನಮ್ಮ ಸಂಸ್ಥೆಯು ಅನೇಕ ಸಮಾಜಮುಖಿ ಪ್ರಾಜೆಕ್ಟ್ ಕಾರ್ಯಗಳನ್ನು ಮಾಡುವುದರ ಮೂಲಕ ಯಶಸ್ವಿಯಾಗಿ ಪೂರೈಸಿದ ಅನೇಕ ಅತ್ಯುತ್ತಮ ಅಧ್ಯಕ್ಷರುಗಳನ್ನು ಕಂಡು ಸಂಸ್ಥೆಯು ಅನೇಕ ಕ್ರಿಯಾಶೀಲ ಸದಸ್ಯರುಗಳನ್ನು ಹೊಂದಿದೆ. 2011 ನೇ ಸಾಲಿನಲ್ಲಿ ನಮ್ಮ ಸಂಸ್ಥೆಯ ಪ್ರಾಯೋಜಕತ್ವದಲ್ಲಿ ತರೀಕೆರೆ ಇನ್ನರ್ ವೀಲ್ ಕ್ಲಬ್ ಅಸ್ತಿತ್ವಕ್ಕೆ ಬಂದಿದ್ದು, ಹೀಗೆ ಸಂಸ್ಥೆಯ ದಾರಿಯು ಯಶಸ್ಸಿನತ್ತ ಸಾಗಿದೆ. ನಿಮ್ಮ ಸಹಕಾರದೊಂದಿಗೆ ಸಂಸ್ಥೆಯು ಇನ್ನೂ ಹೆಚ್ಚಿನ ಎತ್ತರಕ್ಕೆ ಬೆಳೆಸಲು ಸಹಕಾರ ನೀಡಿ ಪ್ರೋತ್ಸಾಹಿಸಬೇಕಾಗಿ ಮನವಿ.

ತಮ್ಮ ಅವಗಾಹನೆಗೆ,

**ಮಾಹಿತಿಯೊಂದಿಗೆ**



Scanned with CamScanner

# ಮಾರ್ಗರೆಟ್ ಅಲಿವರ್ ಗೋಲ್ಡಿಂಗ್ .....

## ಇನ್ನರ್ ವೀಲ್ ಸಂಸ್ಥಾಪಕರು....

ಪ್ರಪಂಚದಾದ್ಯಂತ ಮಾನವ ಕುಲದ ಸೇವೆಗೆ ಪಣತೊಟ್ಟು ನಿಂತ ಅಂತರಾಷ್ಟ್ರೀಯ ಸಂಸ್ಥೆ ರೋಟರಿ ಕ್ಲಬ್. ಈ ಸಂಸ್ಥೆಯಲ್ಲಿ ಅನೌಪಚಾರಿಕವಾಗಿ ಮಹಿಳೆಯರು ಭಾಗಿಯಾಗುತ್ತಿದ್ದರು. ಆದರೆ ಅಲ್ಲಿಯ ಬೇಧ ಭಾವ ಅವರ ಸದಸ್ಯತ್ವದ ಅಧಿಕಾರಕ್ಕೆ ತಡೆಯೊಡ್ಡಿತು. 1923 ನವೆಂಬರ್ 15 ರಂದು ಮಾರ್ಗರೆಟ್ ಗೋಲ್ಡಿಂಗ್ ರವರು 26 ಜನ ಶ್ರೀಮತಿಯರೊಂದಿಗೆ ಸೇರಿ ರೋಟರಿ ಕ್ಲಬ್‌ಗೆ ಒಂದು ಅಂಗ ಸಂಸ್ಥೆಯಾಗಿ ಸ್ಥಾಪನೆ ಮಾಡಿದರು.

ಆ ಸಂಸ್ಥೆಯ ಸದಸ್ಯರಿಗೆ ಸಾಮಾಜಿಕ ಸಹಕಾರವನ್ನು ನೀಡಲು ಮೊದಲ ಬಾರಿಗೆ 10 ಜನವರಿ 1924 ರಂದು ಮ್ಯಾಂಚೆಸ್ಟರ್‌ನಲ್ಲಿ ಒಂದು ಸಭೆಯನ್ನು ನಡೆಸಿ ರೋಟರಿ ಕ್ಲಬ್‌ನ ಸದಸ್ಯರ ಪತ್ನಿಯರಿಗೋಸ್ಕರ ಇನ್ನರ್ ವೀಲ್ ಕ್ಲಬ್ ಸಂಘಟನೆಯನ್ನು ಸ್ಥಾಪಿಸಿ ನಾಮಕರಣ ಮಾಡಿದರು. ಬ್ರಿಟನ್‌ನಲ್ಲಿ ಇದೇ ರೀತಿಯ ಅನ್ಯ ಸಮೂಹಗಳಿದ್ದು, ಮಾರ್ಗರೆಟ್ ಗೋಲ್ಡಿಂಗ್ ಇವರನ್ನು ಸಹ ಇನ್ನರ್ ವೀಲ್ ಕ್ಲಬ್ ರಾಷ್ಟ್ರೀಯ ಸಂಘಟನೆಯ ಮುಖಾಂತರ ಸಂಘಟಿಸಿದರು.

ಈ ಸಂಸ್ಥೆಯ ಸ್ಥಾಪಿಕರಾದ ಮಿಸ್ ಮಾರ್ಗರೆಟ್ ಗೋಲ್ಡಿಂಗ್‌ರವರು ಬ್ರಿಟನ್‌ನ ಬ್ಲಾನೋ ಎಫೋಫೆಸ್ಟ್‌ನೋಗ್‌ನಲ್ಲಿ ಜನಿಸಿದರು. ಇವರು ಉತ್ತಮ ನರ್ಸ್ ತರಬೇತಿ ಹೊಂದಿದ್ದು, ಜೊತೆಯಲ್ಲಿ ವ್ಯಾಪಾರ ವಹಿವಾಟನ್ನು ನಡೆಸುವಂತವರಾಗಿದ್ದರು. ಮೊದಲ ಮಹಾಯುದ್ಧದಲ್ಲಿ ಇವರ ಸೇವೆಯು ಸ್ಮರಣೀಯ. ನಂತರದಲ್ಲಿ ಇವರು ಒಲಿವರ್ ಗೋಲ್ಡಿಂಗ್‌ರವರನ್ನು ವಿವಾಹವಾಗಿ ಮಾರ್ಗರೆಟ್ ಒಲಿವರ್ ಗೋಲ್ಡಿಂಗ್ ಆಗಿ ಪ್ರಖ್ಯಾತರಾದರು. ನಂತರ ಅತಿ ಚಿಕ್ಕ ವಯಸ್ಸು 1939ರಲ್ಲಿ ನಿಧನ ಹೊಂದಿದರು. ಇವರು ಸ್ಥಾಪಿಸಿದ ಈ ಸಂಸ್ಥೆಯು ಇಂದು ಪ್ರಪಂಚದಲ್ಲಿ ದೊಡ್ಡದಾದ ಸಂಘಟನೆಯಾಗಿದೆ.

ತಮ್ಮ ಅವಗಾಹನೆಗೆ,

**ಸಂಗ್ರಹ**



Scanned with CamScanner

# ಇನ್ನರ್ ವೀಲ್ ಗೀತೆ

ಇಪ್ಪತ್ತೈದು ವರ್ಷವಾಯ್ತು ನಮ್ಮ ಸಂಸ್ಥೆಗೆ
ಬೆಳ್ಳಿ ಹಬ್ಬ ಮಾಡಲು ಹೊರಟೆವು ನಮ್ಮ ಸಂಸ್ಥೆಗೆ
ನಮ್ಮ ಇನ್ನರ್ ವೀಲ್ ಸಂಸ್ಥೆಗೆ

ವರ್ಷಕ್ಕೊಬ್ಬರು ಅಧ್ಯಕ್ಷರಾಗಿ
ನಿಯಮಗಳಿಗೆ ಬದ್ಧರಾಗಿ
ನಾವು ಯಾರಿಗೂ ಕಮ್ಮಿಯಿಲ್ಲ
ಎಂದು ಸಾರುವ, ಸಾರುತ ಮುಂದೆ ಸಾಗುವ ॥ ಇಪ್ಪತ್ತೈದು ॥

ಜಾತಿ ಮತಗಳ ಭೇದವಿಲ್ಲ
ಮೇಲು ಕೀಳು ಇಲ್ಲವೇ ಇಲ್ಲ
ಎಲ್ಲರೂ ಒಂದೇ ಎಂಬ ಮಂತ್ರವ
ಜಗಕೆ ಸಾರುವ ಸಾರುತ ಮುಂದೆ ಸಾಗುವ ॥ ಇಪ್ಪತ್ತೈದು ॥

ಅಂದಿನಿಂದ ಇಂದಿನವರೆಗೂ
ಹತ್ತು ಹಲವು ಕೆಲಸವ ಮಾಡಿ
ಜನರ ಸೇವೆ ಜನಾರ್ಧನ ಸೇವೆ ಎಂದು ಸಾರುವ
ಸಾರುತ ಮುಂದೆ ಸಾಗುವ ॥ ಇಪ್ಪತ್ತೈದು ॥

ಸಾಹಿತ್ಯ ರಚನೆ ಮತ್ತು ರಾಗ ಸಂಯೋಜನೆ,

**ಸವಿತ ಜಗದೀಶ್**



Scanned with CamScanner

# ನಮ್ಮ ಸ್ಥಳದ ಬಗ್ಗೆ .....



ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನಲ್ಲಿ ಪುಟ್ಟ ಹೋಬಳಿ ಮಟ್ಟದ ಪಟ್ಟಣ ನಮ್ಮ ಬೀರೂರು. ನಮ್ಮ ಊರಿನ ಸುತ್ತಮುತ್ತ ಕಲ್ಲತ್ತಿ ಜಲಪಾತ, ಕೆಮ್ಮಣ್ಣುಗುಂಡಿ, ಅಮೃತಾಪುರ ದೇವಾಲಯ ಮತ್ತು ಮದಗದಕೆರೆ, ಐಯ್ಯನಕೆರೆಗಳಿಂದ ಸುತ್ತುವರೆದಿದ್ದೆ ಮತ್ತು ನಮ್ಮ ಊರು ಅರೆ ಮಲೆನಾಡು ಪ್ರದೇಶ. ಕ್ಷೇತ್ರ ಪಾಲಕ ಶ್ರೀ ವೀರಭದ್ರಸ್ವಾಮಿ ಮತ್ತು ಗ್ರಾಮದೇವತೆ ಶ್ರೀ ಅಂತರಘಟ್ಟಮ್ಮನವರು ನೆಲೆಸಿದ್ದಾರೆ. ಈ ಶಾಂತಿ ಮತ್ತು ಸುಂದರವಾದ ಸ್ಥಳ ನಮ್ಮ ಊರಿನ ವಿಶೇಷವೆಂದರೆ ಶ್ರೀ ವೀರಭದ್ರಸ್ವಾಮಿ ದೇವಸ್ಥಾನಕ್ಕೆ ಪುರಾತನ ಇತಿಹಾಸವಿದೆ.

ಈ ದೇವಾಲಯವು ವಿಜಯನಗರ ಹಾಗೂ ಚಾಲುಕ್ಯರ ವಾಸ್ತುಶಿಲ್ಪ ಮಾದರಿಯನ್ನು ಹೊಂದಿದೆ. ದೇವಾಲಯದ ಹೆಬ್ಬಾಗಿಲು ಚಾಲುಕ್ಯರ ವಾಸ್ತುಶಿಲ್ಪವನ್ನು ಮತ್ತು ಗರ್ಭಗುಡಿಯು ವಿಜಯನಗರ ಶೈಲಿಯನ್ನು ಹೋಲುತ್ತದೆ. ಮತ್ತು 400 ವರ್ಷಗಳ ಹಿಂದೆ ವಿಜಯನಗರದಿಂದ ಭಕ್ತರು ದೇವರನ್ನು ಸಾಗಿಸುವಾಗ ಬೀರೂರಿನ ಕೋಡಿ ಬಳಿ ರಥದ ಅಚ್ಚು ಮುರಿದಾಗ ಅಲೇ ದೇವಾಲಯ ಸ್ಥಾಪನೆಗೆ ತೀರ್ಮಾನಿಸಲಾಯಿತು. ಈ ಇತಿಹಾಸ ಹೊಂದಿದ್ದ ರಥದ ಅಚ್ಚು ಮತ್ತು ಗಾಲಿಗಳು ದೇವಾಲಯದ ಸನ್ನಿಧಿಯಲ್ಲಿ ಇಂದಿಗೂ ಇದೆ. ದೇವಾಲಯದ ಹಿಂಭಾಗದಲ್ಲಿ ಪರಿವಾರ ಸಹಿತ ಉಮಾಮಹೇಶ್ವರಿ ಮತ್ತು ಭದ್ರಕಾಳಿ ಅಮ್ಮನವರ ಮಂದಿರವಿದೆ. ಪ್ರತಿ ವರ್ಷ ಮಾರ್ಚ್ ತಿಂಗಳಿನಲ್ಲಿ 9 ದಿನಗಳ ಕಾಲ ಅದ್ದೂರಿ ರಥೋತ್ಸವ ದುಗ್ಗಲಸೇವೆ ಮತ್ತು ಓಕುಳಿ ಸೇವೆ ನಡೆಯುತ್ತದೆ. ನಾಡಿನಾದ್ಯಂತ ಭಕ್ತರು ಭಾಗವಹಿಸುತ್ತಾರೆ. ಬೀರೂರಿನಲ್ಲಿ ವಿಜಯದಶಮಿಯಂದು ನಡೆಯುವ ದಸರಾ ಮಹೋತ್ಸವದಲ್ಲಿ ಇತಿಹಾಸ ಪ್ರಸಿದ್ಧ ಶ್ರೀ ಮೈಲಾರಲಿಂಗೇಶ್ವರ ಕಾರ್ಣಿಕೋತ್ಸವದಲ್ಲಿ ವೀರಭದ್ರನ ಆಹ್ವಾನದ ನಂತರವೇ ಮೈಲಾರಲಿಂಗ ಕಾರ್ಣಿಕ ನಡೆಯುತ್ತದೆ. ಬೀರೂರಿನ ಎಲ್ಲಾ ಸಮುದಾಯದವರು ಭಕ್ತಿಯಿಂದ ಆರಾಧಿಸುವ ವೀರಭದ್ರಸ್ವಾಮಿ ಹೆಸರಿಗೆ ತಕ್ಕಂತೆ ಉಗ್ರ ಸ್ವರೂಪಿಯಾಗಿ ಇಡೀ ಪಟ್ಟಣವನ್ನು ರುದ್ರಭೂಮಿ ಅಥವಾ ರುದ್ರಪಟ್ಟಣ ಎಂದು ಕರೆಯುತ್ತಾರೆ.



Scanned with CamScanner

## ಇನ್ನರ್ ವೀಲ್ ಸಂಸ್ಥೆ ಸ್ಥಾಪನೆಗೊಂಡ ಸಾಲಿನಲ್ಲಿ ನಡೆದ ಪದಗ್ರಹಣ ಸಮಾರಂಭ ಕ್ಷಣಗಳು.....




ಉಲ್ಲಾಸಕ್ಕಾಗಿ ಸಾಧನೆ – ಬೋಧನೆ – ಶೋಧನೆ – ಪ್ರಲೋಭನೆ
ಯೋಚನೆ – ಯೋಜನೆ – ಯಾಚನೆ ಬೇಕಾಗುತ್ತದೆ.

ಸುಭಾಷಿತದಲ್ಲಿರುವಂತೆ :–

ನೂರು ವರ್ಷ ಸುಖಪಡೋಣ !
ನೂರು ವರ್ಷ ಆನಂದದಿಂದಿರೋಣ !
ನೂರು ವರ್ಷ ಸೋಲದೆ ಬಾಳೋಣ !

ಇದನ್ನೇ ಹಿತಬುಕ್, ಮಿತಬುಕ್, ಋತುಬುಕ್ ಎಂದಿದೆ.



Scanned with CamScanner